**ದಿನಾಂಕ:14.10.2014 ರಂದು ಪೂರ್ವಾಹ್ನ 11.00 ಗಂಟೆಗೆ ಮಾನ್ಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಕೊಠಡಿ ಸಂಖ್ಯೆ:229, ಬಹುಮಹಡಿಗಳ ಕಟ್ಟಡ ಇಲ್ಲಿ ಜರುಗಿದ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಪ್ರಗತಿ ಪರಿಶೀಲನಾ ಸಭೆಯ ನಡವಳಿಗಳು.**

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಶ್ರೀ ಟಿ.ಎಂ. ವಿಜಯ ಭಾಸ್ಕರ್, ಭಾ.ಆ.ಸೇ., ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಅಪ ಇಲಾಖೆ, ಬೆಂಗಳೂರು.
2. ಶ್ರೀ ಶ್ರೀಕೃಷ್ಣ ಎನ್. ಬುಗಟ್ಯಾಗೋಳ, ನಿರ್ದೇಶಕರು (ಇ-ಆಡಳಿತ) ಹಾಗೂ ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಅಪ ಇಲಾಖೆ, ಬೆಂಗಳೂರು.
3. ಶ್ರೀ ಪಿ.ವಿ. ಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ., ಬೆಂಗಳೂರು.
4. ಶ್ರೀ ಆರ್. ರಾಜೇಂದ್ರ ಕುಮಾರ್, ತಾಂತ್ರಿಕ ನಿರ್ದೇಶಕರು, ಎನ್ಐಸಿ, ಬೆಂಗಳೂರು.
5. ಶ್ರೀ ಶಶಿಧರ್ ಆರ್. ಸಿದ್ಧಾಂತಿ, ರಾಜ್ಯ ಯೋಜನಾ ವ್ಯವಸ್ಥಾಪಕರು (ಇ-ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
6. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು (ಬಳ್ಳಾರಿ ಮತ್ತು ಬಿಜಾಪುರ ಹೊರತುಪಡಿಸಿ).

ನಿರ್ದೇಶಕರು (ಇ-ಆಡಳಿತ) ಇವರು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರನ್ನು ಮತ್ತು ಹಾಜರಿದ್ದ ಎಲ್ಲಾ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿದರು.

(1) ನಿರ್ದೇಶಕರು (ಇ- ಆಡಳಿತ) ಇವರು **ಗಾಂಧೀ ಸಾಕ್ಷಿ ಕಾಯಕ** ತಂತ್ರಾಂಶದಲ್ಲಿ ದಾಖಲಾಗಿರುವ ಕಾಮಗಾರಿಗಳ ಇಲಾಖಾವಾರು ವೆಚ್ಚದ ವಿವರಗಳನ್ನು ಸಭೆಗೆ ವಿವರಿಸಿದರು. ಈ ಕುರಿತಾಗಿ ವಾಸ್ತವಿಕ ವೆಚ್ಚಗಳೊಂದಿಗೆ ಹೋಲಿಸಿದಾಗ ಇಲಾಖೆಯ ಒಟ್ಟಾರೆ ವೆಚ್ಚದ ಶೇ 20 ರಷ್ಟು ಮಾತ್ರ ತಂತ್ರಾಂಶದಲ್ಲಿ ವಿವರ ದಾಖಲಾಗಿದ್ದು ದಿನಾಂಕ:10.10.2014 ರಂದು ಮಾನ್ಯ ಗ್ರಾಅಪ ಸಚಿವರ ಅಧ್ಯಕ್ಷತೆಯಲ್ಲಿ ಜರುಗಿದ ವೀಡಿಯೋ ಕಾನ್ಫರೆನ್ಸ್‌ನ ನಂತರ ನಮ್ಮ ಗ್ರಾಮ ನಮ್ಮ ರಸ್ತೆ ಹಾಗೂ ಗ್ರಾಮೀಣ ನೀರು ಸರಬರಾಜು ಯೋಜನೆಯಲ್ಲಿ ಮಾತ್ರ ಪ್ರಗತಿ ಕಂಡುಬಂದಿದ್ದು ಉಳಿದ ಯೋಜನೆಗಳಲ್ಲಿ ಪ್ರಗತಿ ಕುಂಠಿತವಾಗಿರುವುದರಿಂದ ದಿನಾಂಕ:20.10.2014 ರೊಳಗಾಗಿ ಪ್ರಗತಿ ಸಾಧಿಸುವಂತೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳಿಗೆ ಸೂಚಿಸಿದರು.

(ಕ್ರಮ: ಮುಖ್ಯ ಲೆಕ್ಕಾಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತ್‌ಗಳು)

(2) ಈ ಕುರಿತು ಹಲವಾರು ಬಾರಿ ನಿರ್ದೇಶನ ನೀಡಿದ್ದರೂ ಅನುಮೋದನೆಗೊಂಡ ಕ್ರಿಯಾ ಯೋಜನೆಯಲ್ಲಿರುವ ಎಲ್ಲಾ ಯೋಜನೆಗಳ, ಎಲ್ಲಾ ಕಾಮಗಾರಿಗಳ ವಿವರಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸದೇ ಇರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿ ದಿನಾಂಕ:20.10.2014ರೊಳಗಾಗಿ ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಎಲ್ಲಾ ಕಾಮಗಾರಿಗಳ ದತ್ತಾಂಶಗಳನ್ನು ಆರೋಹಿಸಲು ಕಟ್ಟುನಿಟ್ಟಾಗಿ ಸೂಚಿಸಿದರು.

(ಕ್ರಮ: ಮುಖ್ಯ ಲೆಕ್ಕಾಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತ್‌ಗಳು)

(3) ಇಲಾಖಾವಾರು ಸಮಗ್ರ ವಿವರಗಳನ್ನು ಪರಿಶೀಲಿಸಿದ ನಂತರ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಯೋಜನೆಯ ಅನುದಾನವನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಆಗಿರುವ ಪ್ರಗತಿಯ ಆಧಾರದ ಮೇಲೆ ಬಿಡುಗಡೆ ಮಾಡಲು ಹಾಗೂ ಯಾವುದೇ ಪ್ರಗತಿ ಸಾಧಿಸಿರದ ಜಿಲ್ಲೆಗಳಿಗೆ ಅನುದಾನವನ್ನು ಕಡಿತಗೊಳಿಸಲು ಕ್ರಮ ತೆಗೆದುಕೊಳ್ಳುವುದೆಂದು ಹಾಗೂ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಶಿಸ್ತುಕ್ರಮ ತೆಗೆದುಕೊಳ್ಳಲಾಗುವುದೆಂದು ತೀರ್ಮಾನಿಸಲಾಯಿತು.

(4) ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ ಬೆಂಗಳೂರು ಇವರು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ಕುರಿತಾದ ಮುಖ್ಯ ಲೆಕ್ಕಾಧಿಕಾರಿಗಳ ಹಲವಾರು ಪ್ರಶ್ನೆಗಳಿಗೆ ಸ್ಪಷ್ಟೀಕರಣ ನೀಡಿದರು.

(5) ಎಲ್ಲಾ ಜಿಲ್ಲೆಗಳ 2013–14 ನೇ ಸಾಲಿನ ಹಲವು ಮುಂದುವರೆದ ಕಾಮಗಾರಿಗಳನ್ನು (Spill over) ಎಂದು ನಮೂದಿಸದೇ ಸದರಿ ಕಾಮಗಾರಿಗೆ 2014–15 ನೇ ಸಾಲಿನಲ್ಲಿ ಪಾವತಿ ಆದೇಶ ಸೃಜಿಸಲಾಗಿತ್ತು. ಹಾಗಾಗಿ ಎನ್.ಐ.ಸಿ ಯವರು ಸುಮಾರು 7,000 ಕಾಮಗಾರಿಗಳನ್ನು ಮುಂದುವರೆದ ಕಾಮಗಾರಿಗಳು (Spill over) ಎಂದು ಸರಿಪಡಿಸಿರುವುದಾಗಿ ತಿಳಿಸಿದರು. ಹಾಗಾಗಿ ಇನ್ನು ಮುಂದೆ 2013–14ನೇ ಸಾಲಿನ ಕಾಮಗಾರಿಗಳಿಗೆ ಪಾವತಿ ಆದೇಶ ಸೃಜನೆ ಮಾಡುವಾಗ ಮುಂದುವರೆದ ಕಾಮಗಾರಿಗಳೆಂದು (Spill over) ನಮೂದಿಸಲು ತಿಳಿಸಿದರು.

(6) ಕೆಲವೊಂದು ಮುಖ್ಯ ಲೆಕ್ಕಾಧಿಕಾರಿಗಳು ಈ ಕುರಿತು ತರಬೇತಿ ಅಗತ್ಯವೆಂದು ಕೋರಿದ್ದರಿಂದ ತರಬೇತಿಯನ್ನು ಸಹ ಸಭೆಯಲ್ಲಿ ನೀಡಲಾಯಿತು. ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದಲ್ಲಿ ಅಳವಡಿಸಿರುವ ಅಂಕಿ–ಅಂಶಗಳನ್ನು ಗಾಂಧಿ ಸಾಕ್ಷಿ ಕಾಯಕ ತಂತ್ರಾಂಶದ ವೆಬ್‌ಸೈಟ್‌ನಲ್ಲಿ ಸಾರ್ವಜನಿಕರಿಗೆ ಹೇಗೆ ಉಪಯೋಗವಾಗುತ್ತದೆಂದು ಎನ್.ಐ.ಸಿ ಅಧಿಕಾರಿಗಳು ವಿವರಿಸಿದರು.

ವಂದನಾರ್ಪಣೆಯೊಂದಿಗೆ ಸಭೆಯು ಮುಕ್ತಾಯಗೊಂಡಿತು.

ಸಂ:ಗ್ರಾಅಪ:28/ಗಣಕ ಕೋಶ–2014
ದಿನಾಂಕ:15.10.2014

(ಶ್ರೀಕೃಷ್ಣ ಎನ್. ಬ್ಯಾಗಟ್ಯಾಗೋಳ)
ನಿರ್ದೇಶಕರು(ಇ–ಆಡಳಿತ) ಮತ್ತು
ಸ್ವ ಉದ್ಯೋಗ ಕಾರ್ಯಕ್ರಮ ಹಾಗೂ
ಪ/ನಿ ಸರ್ಕಾರದಉಪಕಾರ್ಯದರ್ಶಿ(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಇವರಿಗೆ:

1. ಶ್ರೀ ಪಿ.ವಿ. ಭಟ್, ಹಿರಿಯ ತಾಂತ್ರಿಕ ನಿರ್ದೇಶಕರು, ಎನ್.ಐ.ಸಿ., ಬೆಂಗಳೂರು.
2. ಶ್ರೀ ಆರ್. ರಾಜೇಂದ್ರ ಕುಮ್ಹಾರ್, ತಾಂತ್ರಿಕ ನಿರ್ದೇಶಕರು, ಎನ್‌ಐಸಿ, ಬೆಂಗಳೂರು.
3. ಶ್ರೀ ಶಶಿಧರ್ ಆರ್. ಸಿದ್ಧಾಂತಿ, ರಾಜ್ಯ ಯೋಜನಾ ವ್ಯವಸ್ಥಾಪಕರು (ಇ–ಪಂಚಾಯತ್), ಗ್ರಾಅಪ ಇಲಾಖೆ, ಬೆಂಗಳೂರು.
4. ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಲೆಕ್ಕಾಧಿಕಾರಿಗಳು.

ಪ್ರತಿ:

ಪ್ರತಿ:

1. ಮಾನ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ಕಾರ್ಯದರ್ಶಿಗಳು(ಪಂ.ರಾಜ್)/ಆಯುಕ್ತರು(ಗ್ರಾಮೀಣಾಭಿವೃದ್ಧಿ) /ನಿರ್ದೇಶಕರು(ಇ-ಆಡಳಿತ) ಇವರ ಆಪ್ತ ಕಾರ್ಯದರ್ಶಿ/ಆಪ್ತ ಸಹಾಯಕರಿಗೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ.